ದಿನಾಂಕ ಃ 28.03.2022 ಮಿಸ್ ನಂ.13/2017 ರಲ್ಲಿ
ಪಿ.ಡಬ್ಲ್ಯೂ-1(ಗೌತಮ್.ಸಿ)

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಎದುರುದಾರರ ಪರ ಶ್ರೀ ಎನ್.ಎಸ್.ಎಸ್ ವಕೀಲರಿಂದಃ

ಅಸಲುದಾವೆಯಲ್ಲಿ ನನ್ನ ವಿಚಾರಣೆ ಪೂರ್ಣಗೊಂಡಿತ್ತು ಎಂದರೆ ಸರಿ. ಅರ್ಜಿ ಏನು ಎಂದರೆ ಸಾಕ್ಷಿಯು ನವೆಂಬರ್ 2013 ರಲ್ಲಿ ನ್ಯಾಯಾಲಯ ಪ್ರತಿವಾದಿ ಆಸ್ತಿ ಮಾರಾಟ ಮಾಡಬಾರಬೆಂದು ಆದೇಶ ಮಾಡಿದ್ದು, ಅದನ್ನು ಉಲ್ಲಂಘಿಸಿ ಆಸ್ತಿ ಮಾರಾಟ ಮಾಡಿದ ಕಾರಣ ಅರ್ಜಿ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ಪ್ರಸ್ತುತ ನಾನು ಯಾವ ಅರ್ಜಿಯ ಮೇಲೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿಯು ಪ್ರತಿವಾದಿ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ಆಸ್ತಿ ಮಾರಾಟ ಮಾಡಿದ್ದು, ಆ ಬಗ್ಗೆ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ನುಡಿಯುತ್ತಾರೆ. ಅಸಲುದಾವೆಯಲ್ಲಿ ನಾನು ಮಧ್ಯಂತರ ಅರ್ಜಿಯನ್ನು ಯಾವಾಗ ಸಲ್ಲಿಸಿದ್ದೆ ಎಂದರೆ ಸಾಕ್ಷಿಯು 2014 ಅಥವಾ 2016 ಎಂದು ನುಡಿದು, ನಂತರ ಸೆಪ್ಟೆಂಬರ್ 2016 ಎಂದು ನುಡಿಯುತ್ತಾರೆ. ನಾನು ಅರ್ಜಿಯಲ್ಲಿ ಏನು ಮನವಿ ಅಥವಾ ಮನವಿಗಳನ್ನು ಕೇಳಿದ್ದೆ ಎಂದರೆ ಸಾಕ್ಷಿಯು ವ್ಯಾಜ್ಯದಲ್ಲಿರುವ ಸ್ವತ್ತನ್ನು ದಾವೆ ಮುಗಿಯುವವರೆಗೆ ಯಥಾ ಸ್ಥಿತಿಯಲ್ಲಿಡಬೇಕೆಂದು ಕೇಳಿಕೊಂಡಿದ್ದೆ ಎಂದು ನುಡಿಯುತ್ತಾರೆ. ಅರ್ಜಿಯನ್ನು ತಯಾರಿಸಿದವರು ಯಾರು ಎಂದರೆ ಸಾಕ್ಷಿಯು ನಾನು ಕೊಟ್ಟ ಮಾಹಿತಿಯ ಆಧಾರದಲ್ಲಿ ನಮ್ಮ ವಕೀಲರು ತಯಾರಿಸಿದ್ದರು ಎಂದು ನುಡಿಯುತ್ತಾರೆ. ಅರ್ಜಿಯನ್ನು ಯಾರು ತಯಾರಿಸಿದ್ದರು ಎಂದರೆ ನಾನು ಎಂದು ಸಾಕ್ಷಿಯು ನುಡಿಯುತ್ತಾರೆ. ಅರ್ಜಿಯ ಜೊತೆ ಸಲ್ಲಿಸಿದ ಪ್ರಮಾಣಪತ್ರವನ್ನು ಯಾರು ಮಾಡಿದ್ದರು ಎಂದರೆ ನಾನು ತಯಾರಿಸಿದ್ದೆ ಎಂದು ಸಾಕ್ಷಿಯು ನುಡಿಯುತ್ತಾರೆ, ಸಾಕ್ಷಿಯು ಮುಂದುವರೆದು ನಮ್ಮ

ವಕೀಲರು ಯಾರೋ ಒಬ್ಬರು ತಯಾರಿಸಿದ್ದಿರಬಹುದು ಅದಕ್ಕೆ ನಾನು ಸಹಿ ಮಾಡಿ ನೋಟರೈಸ್ಡ್ ಮಾಡಿಸಿದ್ದೆ ಎಂದು ನುಡಿಯುತ್ತಾರೆ. ಗುರುತು ಹಚ್ಚಿದ ವಕೀಲರು ಯಾರು ಎಂದರೆ ಸಾಕ್ಷಿಯು ನನ್ನ ಪರಿಚಯದವರು, ಮುಂದುವರೆದು ನನಗೆ ಇಬ್ಬರು ವಕೀಲರಿದ್ದು ಒಬ್ಬರು ಬೆಂಗಳೂರಿನ ಹಿರಿಯ ವಕೀಲರಾಗಿದ್ದು, ಅವರು ನನ್ನ ಸಂಬಂಧಿಕರಾಗಿದ್ದು ನನಗೆ ಈಗ ಅವರ ಹೆಸರು ಜ್ಞಾಪಕ ಬರುತ್ತಿಲ್ಲ, ಈಗ ನನ್ನ ವಕೀಲರು ಶ್ರೀ ಅಶೋಕ್ ರವರು ಎಂದು ಸಾಕ್ಷಿಯು ನುಡಿಯುತ್ತಾರೆ. ಗುರುತು ಹಚ್ಚಿದ ವಕೀಲರು ಯಾರು ಎಂದು ನನಗೆ ನೆನಪಿಲ್ಲ. ವಕೀಲರು ನನ್ನನ್ನು ಯಾರ ಬಳಿ ಕರೆದುಕೊಂಡು ಹೋಗಿ ಗುರುತು ಹಚ್ಚಿದ್ದರು ಎಂದರೆ ಸಾಕ್ಷಿಯು ಯಾರ ಬಳಿಯೂ ಕರೆದುಕೊಂಡು ಹೋಗಿಲ್ಲ ಅವರ ಕಛೇರಿಯಲ್ಲೇ ಅರ್ಜಿ ಭರ್ತಿ ಮಾಡಿ ಅವರೇ ಗುರುತು ಹಚ್ಚಿದ್ದರು ಎಂದು ನುಡಿಯುತ್ತಾರೆ.

ನನ್ನ ತಂದೆಯ ತಂದೆ ಲಿಂಗಪ್ಪ ಅಂದರೆ ನನ್ನ ತಾತನ ಕುಟುಂಬದಲ್ಲಿ ಯಾರೆಲ್ಲಾ ಪದವಿ ಪಡೆದಿದ್ದರು ಹಾಗೂ ಯಾರೆಲ್ಲಾ ಪ್ರಾಥಮಿಕ ಶಾಲಾ ಶಿಕ್ಷಣವನ್ನು ಪಡೆದಿದ್ದರು ಎಂದರೆ ಸಾಕ್ಷಿಯು ಆ ಸಮಯದಲ್ಲಿ ನಾನು ಹುಟ್ಟಿರಲಿಲ್ಲ, ಯಾರೆಲ್ಲಾ ಶಾಲೆಗೆ ಹೋಗಿದ್ದರು ಹೋಗಿರಲಿಲ್ಲ ಎಂದು ನನಗೆ ಗೊತ್ತಿಲ್ಲ, ನನ್ನ ತಂದೆ ಬಿ.ಇ (ಮೆಕ್ಯಾನಿಕಲ್) ಪದವಿ ಪಡೆದಿದ್ದರು ಎಂದು ನುಡಿಯುತ್ತಾರೆ. ನನ್ನ ತಾತ 1980 ರಲ್ಲಿ ತೀರಿಹೋದಾಗ ನನಗೆ 6-7 ವರ್ಷ ವಯಸ್ಸು ಆಗಿದ್ದಿರಬಹುದು, ಅವರು ರೈತರಾಗಿದ್ದು ಅವರು ಎಷ್ಟು ವಿದ್ಯಾಭ್ಯಾಸ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ, ಅವರು ಇಂಜಿನೀಯರ್ ಆಗಿರಲಿಲ್ಲ ಎಂದು ನನಗೆ ಗೊತ್ತು. ನಾನು ಬಿ.ಇ ಪದವಿಯನ್ನು

ದಿನಾಂಕ : 28.03.2022 ಮಿಸ್ ನಂ.13/2017 ರಲ್ಲಿ
ಪಿ.ಡಬ್ಲ್ಯೂ-1(ಗೌತಮ್.ಸಿ)

Environmental Science ನಲ್ಲಿ ಪಡೆದಿದ್ದು, ಸ್ನಾತಕೋತ್ತರ ಪದವಿಯನ್ನು ಪಡೆದು ಎಂ.ಬಿ.ಎ ಮಾಡಿದ್ದೇನೆ. ನನ್ನ ಚಿಕ್ಕಪ್ಪ ಶಿವಲಿಂಗಯ್ಯನವರಿಗೆ ನನಗೆ ತಿಳಿದ ಪ್ರಕಾರ ನನ್ನ ತಂದೆಯಂತೆ ವಿದ್ಯಾಭ್ಯಾಸ ಮಾಡಲು ಅವಕಾಶಗಳು ಇದ್ದರೂ 6 ನೇ ತರಗತಿಯಲ್ಲಿ ಅನುತ್ತೀರ್ಣರಾಗಿದ್ದರು ಎಂದು ನುಡಿಯುತ್ತಾರೆ, ಸಾಕ್ಷಿಯು ಮುಂದುವರೆದು ನನ್ನ ಚಿಕ್ಕಪ್ಪ ಅಲ್ಲಿ ಇಲ್ಲಿ ಓಡಾಡಿಕೊಂಡು ಸಮಯ ಕಳೆಯುತ್ತಿದ್ದರು ಎಂದು ನುಡಿಯುತ್ತಾರೆ.

ನನ್ನ ತಾತ ರೈತರು, ವ್ಯವಸಾಯ ಮಾಡುತ್ತಿದ್ದರು. ನನ್ನ ತಂದೆ ಮತ್ತು ಚಿಕ್ಕಪ್ಪ ರೈತರ ಮಕ್ಕಳು. ನನ್ನ ತಂದೆ ಮತ್ತು ಚಿಕ್ಕಪ್ಪ ವ್ಯವಸಾಯ ಮಾಡುತ್ತಿದ್ದರು ಎಂದು ಅನಿಸುತ್ತೆ. ನಾನು ದೊಡ್ಡವನಾಗುತ್ತಾ ಬಂದಾಗ ನನ್ನ ತಂದೆ ನನ್ನ ಚಿಕ್ಕಪ್ಪನಿಗೆ ಹಣ ಕಳುಹಿಸುತ್ತಿದ್ದು, ನನ್ನ ತಂದೆ ಅಲ್ಲಿಗೆ ಹೋಗಿ ವ್ಯವಸಾಯ ಮಾಡುತ್ತಿದ್ದುದು ನನಗೆ ಗೊತ್ತಿತ್ತು ಎಂದು ನುಡಿಯುತ್ತಾರೆ. ನಾನು ಇದುವರೆಗೂ ವ್ಯವಸಾಯ ಮಾಡಿಲ್ಲ. ನನ್ನ ತಾತ ಒಬ್ಬರು ವ್ಯವಸಾಯ ಮತ್ತು ಹೈನುಗಾರಿಕೆ ಮಾಡುತ್ತಿದ್ದುದು ನನಗೆ ನೆನಪಿದೆ. ಶಿವಲಿಂಗಯ್ಯನವರು ಎಲ್ಲಿಯವರಗೆ ವಿದ್ಯಾಭ್ಯಾಸ ಮಾಡಿದ್ದರು ಎನ್ನುವ ಬಗ್ಗೆ ನನ್ನಲ್ಲಿ ದಾಖಲೆ ದಾವೆ ಸಲ್ಲಿಸುವಾಗ ಇರಲಿಲ್ಲ. ನನ್ನ ತಾತ ಲಿಂಗಪ್ಪ ರೈತರಾಗಿದ್ದು ಕುರಿ, ಆಡು, ದನ, ಎಮ್ಮೆ ಮೇಯಿಸುತ್ತಿದ್ದರು ಮತ್ತು ಹೊಲದಲ್ಲಿ ಕೆಲಸ ಮಾಡುತ್ತಿದ್ದು ಅದರಿಂದಲೇ ಜೀವನ ನಡೆಸುತ್ತಿದ್ದರು ಎಂದರೆ ಸರಿ. ನಾನು ದೊಡ್ಡವನಾಗುತ್ತಾ ಬಂದಾಗ ತಾತನ ಮನೆಗೆ ಹೋಗುತ್ತಿದ್ದು, ಅವರು ಕೆಲಸ ಮಾಡುವುದನ್ನು ನೋಡುತ್ತಿದ್ದೆ ಎಂದು ಸಾಕ್ಷಿಯು ನುಡಿಯುತ್ತಾರೆ. ನನ್ನ ತಾತ ಯಾವೆಲ್ಲಾ ಜಮೀನುಗಳಲ್ಲಿ ಕೆಲಸ ಮಾಡುತ್ತಿದ್ದರು ಎನ್ನುವ

ದಿನಾಂಕ : 28.03.2022 ಮಿಸ್ ನಂ.13/2017 ರಲ್ಲಿ
ಪಿ.ಡಬ್ಲ್ಯೂ-1(ಗೌತಮ್.ಸಿ)

ಬಗ್ಗೆ ನನಗೆ ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಹಿಂದಿನ ಕಾಲದಲ್ಲಿ ತಿಪ್ಪೆಯಿಂದ ಗೊಬ್ಬರವನ್ನು ಕತ್ತೆಯ ಮೇಲೆ ಚೀಲವನ್ನು ಹಾಕಿ ಜಮೀನುಗಳಿಗೆ ರವಾನೆ ಮಾಡುತ್ತಿದ್ದರು ಎಂದರೆ ಇರಬೇಕು, ನನಗೆ ನಿರ್ದಿಷ್ಟವಾಗಿ ಗೊತ್ತಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ಅಸಲುದಾವೆಯಲ್ಲಿ ನನ್ನ ತಂದೆ ನ್ಯಾಯಾಲಯಕ್ಕೆ ಹಾಜರಾಗಿ ಲಿಖಿತ ಹೇಳಿಕೆ ಸಲ್ಲಿಸಿ ಸಾಕ್ಷಿ ನುಡಿಯುತ್ತಿದ್ದರೆ ಇಷ್ಟೆಲ್ಲಾ ಪ್ರಶ್ನೆಗಳನ್ನು ಕೇಳುವ ಪ್ರಮೇಯ ಇರುತ್ತಿರಲಿಲ್ಲ ಎಂದರೆ ನಾನು ಅದನ್ನು ಒಪ್ಪುವುದಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ನನಗೆ ಈಗ 48 ವರ್ಷ ವಯಸ್ಸು. ನನ್ನ ತಂದೆ 1939 ರಲ್ಲಿ ಜನಿಸಿದ್ದು ಅವರಿಗೆ ಈಗ 83 ವರ್ಷ ವಯಸ್ಸು. ನನ್ನ ತಂದೆ ಕೆ.ಎಸ್.ಆರ್.ಟಿ.ಸಿ ಯಲ್ಲಿ ಡಿವಿಜನಲ್ ಕಂಟ್ರೋಲರ್ ಆಗಿ ಯಾವಾಗ ನಿವೃತ್ತಿ ಹೊಂದಿದ್ದರು ಎಂದರೆ ನನ್ನ ತಂದೆ ಅವರ 53 ವಯಸ್ಸಿನಲ್ಲಿ ಸ್ವಯಂ ನಿವೃತ್ತಿ ಪಡೆದುಕೊಂಡಿದ್ದು, 1992 ರಲ್ಲಿ ನಿವೃತ್ತರಾಗಿದ್ದರು ಎಂದು ಸಾಕ್ಷಿಯು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಅನುಪಮ ಲಕ್ಷ್ಮಿ.ಬಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ರಾಮನಗರ.